# ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com ವಿಶೇಷ ಪುರವಣಿ

ಸಂಪುಟ 8 ಸಂಚಿಕೆ 15 ಏಪ್ರಿಲ್ 13, 2014 ಪುಟ 4 ರೂ. 5






## ಪರ್ಯಾಯ ನೀತಿಗಳ ಸಿಪಿಐ(ಎಂ) ಚುನಾವಣಾ ಪ್ರಣಾಳಿಕೆ ಬಿಡುಗಡೆ

**16ನೇ ಲೋಕಸಭಾ ಚುನಾವಣೆ 2014**

## ಕಾಂಗ್ರೆಸ್ಸನ್ನು ತಿರಸ್ಕರಿಸಿ ಬಿಜೆಪಿಯನ್ನು ಸೋಲಿಸಿ ಸಿಪಿಐ(ಎಂ) ಗೆ ಮತ ನೀಡಿ

## ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ ಎಡಪಕ್ಷಗಳನ್ನು ಬೆಂಬಲಿಸಿ

# ಜನಪರ ಹೋರಾಟಗಾರ ಮತ್ತು ರಾಜ್ಯದ ಮಾದರಿ ಸಂಸದೀಯ ಪಟು ಕಾಮ್ರೇಡ್ ಜಿ.ವಿ. ಶ್ರೀರಾಮರೆಡ್ಡಿಯವರನ್ನು ಬೆಂಬಲಿಸಲು ಮನವಿ

ಹದಿನಾರನೇ ಲೋಕಸಭೆಗೆ ನಡೆಯಲಿರುವ ಚುನಾವಣೆಗಳಲ್ಲಿ ಕರ್ನಾಟಕದ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಸಿಪಿಐ(ಎಂ) ಅಭ್ಯರ್ಥಿಯಾಗಿ ಕಾಂ. ಶ್ರೀರಾಮರೆಡ್ಡಿ ಸ್ಪರ್ಧಿಸುತ್ತಿದ್ದಾರೆ. ಅವರು ಸಿಪಿಐ(ಎಂ) ರಾಜ್ಯ ಸಮಿತಿಯ ಹಾಲಿ ಕಾರ್ಯದರ್ಶಿಯೂ ಮತ್ತು ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿಯ ಸದಸ್ಯರೂ ಆಗಿದ್ದಾರೆ. ಎರಡು ಬಾರಿ(1994 ಮತ್ತು 2000ರಲ್ಲಿ) ಅವರು ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಿಂದ ಕರ್ನಾಟಕ ವಿಧಾನ ಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದರು. ಸಿಪಿಐ(ಎಂ) ಪಕ್ಷದ ವಲಯದಲ್ಲಿ ಹಾಗೂ ಸಾರ್ವಜನಿಕರ ನಡುವೆಯೂ ಸಹ 'ಜಿವಿಎಸ್' ಎಂದು ಪರಿಚಿತರಾಗಿರುವ ಅವರ ನಲವತ್ತು ವರ್ಷಗಳ ಸಾರ್ವಜನಿಕ ಸೇವೆಯು ಜನಮನದಲ್ಲಿ ಸ್ಥಿರವಾಗಿದೆ.

ವಿದ್ಯಾರ್ಥಿಯಾಗಿದ್ದಾಗಲೇ ಪ್ರಜಾಪ್ರಭುತ್ವ ಚಳುವಳಿಗೆ ಆಕರ್ಷಿತರಾದ ಅವರು ಕರ್ನಾಟಕದಲ್ಲಿ ಭಾರತ ವಿದ್ಯಾರ್ಥಿ ಫೆಡೆರೇಶನ್ (ಎಸ್ಎಫ್ಐ) ಸಂಸ್ಥಾಪಕರಲ್ಲೊಬ್ಬರು. ಕಮ್ಯೂನಿಸ್ಟ್ ಚಳುವಳಿಯ ಮಹಾನ್ ನಾಯಕರಲ್ಲೊಬ್ಬರಾದ ಕಾಂ. ಎ.ಕೆ. ಗೋಪಾಲನ್ ನೇತೃತ್ವದಲ್ಲಿ ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ಆರಂಭಿಸಿದ 'ಜೋಡಿದಾರ್ ಪದ್ದತಿ' ವಿರುದ್ದದ, ಭೂಹೀನ ರೈತರ ಪರವಾದ ಪ್ರಖ್ಯಾತ 'ಭೂಮಿ ಚಳುವಳಿ'ಯಲ್ಲಿ ಆಗ ವಿದ್ಯಾರ್ಥಿ ನಾಯಕನಾಗಿದ್ದ ಕಾಂ. ಜಿ.ವಿ.ಶ್ರೀರಾಮರೆಡ್ಡಿ ಪ್ರಮುಖ ಪಾತ್ರ ವಹಿಸಿದ್ದರು. ನಂತರ, ಅವರು ಯುವಜನರ ಚಳುವಳಿಯಲ್ಲಿ ತೊಡಗಿ ಕರ್ನಾಟಕದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡೆರೇಶನ್(ಡಿವೈಎಫ್ಐ) ಸಂಘಟನೆಯನ್ನು ಆರಂಭಿಸುವಲ್ಲಿ ಪ್ರಮುಖ ಪಾತ್ರವಹಿಸಿದರು.


ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಿಂದ ಸಿಪಿಐ(ಎಂ) ಪಕ್ಷದ ಪ್ರತಿನಿಧಿಯಾಗಿ ವಿಧಾನ ಸಭಾ ಸದಸ್ಯರಾಗಿ ಆಯ್ಕೆಯಾಗಿದ್ದ ಕಾಂ. ಅಪ್ಪಸ್ವಾಮಿರೆಡ್ಡಿಯವರ ಅವಧಿ ಮುಗಿದ ನಂತರ, ಕ್ಷೇತ್ರದಲ್ಲಿ ಅವರ ಸ್ಥಾನವನ್ನು ತುಂಬಿದವರು ಕಾಂ. ಜಿ.ವಿ.ಶ್ರೀರಾಮ ರೆಡ್ಡಿ. ಆ ಸಮಯದಿಂದ 'ಜಿವಿಎಸ್' ಜನರ ಮಧ್ಯೆ ಆ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದು ಜನಪರ ಚಳುವಳಿ ಸಂಘಟಿಸುವುದರಲ್ಲಿ ತೊಡಗಿದ್ದಾರೆ.


ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ಪಕ್ಷದ ಮುಂದಾಳತ್ವವಹಿಸಿದ್ದ ಅವರು ಆ ಜಿಲ್ಲೆಯ ವಿಭಜನೆಯ ನಂತರ ಹೊಸದಾಗಿ ರಚಿತವಾದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪಕ್ಷದ ಜಿಲ್ಲಾ ಘಟಕದ ಕಾರ್ಯದರ್ಶಿಯಾಗಿ, 2012ರಲ್ಲಿ ಅವರು ಪಕ್ಷದ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ ಆಯ್ಕೆಯಾಗುವವರೆಗೂ, ಕಾರ್ಯನಿರ್ವಹಿಸಿದರು.

ಭಾರತ ದೇಶದ ದುಡಿಯುವ ಜನರ ಆಶಾಕಿರಣವಾದ–ಶೋಷಿತರ–ನೊಂದವರ– ಜನ ಸಾಮಾನ್ಯರ ದನಿಯಾದ ಸಿಪಿಐ(ಎಂ) ಕೇಂದ್ರ ಸಮಿತಿಗೆ ಕಲ್ಲೀಕೋಟೆಯಲ್ಲಿ ನಡೆದ 20ನೇ ಮಹಾಧಿವೇಶನದಲ್ಲಿ ಆಯ್ಕೆಯಾದರು. ಬಾಗೇಪಲ್ಲಿ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದ ಅವರು ದುಡಿಯುವ ಜನತೆಯ ರಕ್ಷಣೆಗಾಗಿ ಮತ್ತು ಶೋಷಣೆಯ ವಿರುದ್ಧವಾಗಿ ಕರ್ನಾಟಕ ವಿಧಾನ ಸಭೆಯಲ್ಲಿ ಒಂಟಿ ಧ್ವನಿಯಾಗಿದ್ದರು.

- ಗ್ರಾನೈಟ್ ಗಣಿಗಾರಿಕೆಯಲ್ಲಿ ತೊಡಗಿದ್ದ ಕೆಲವು ಪ್ರಭಾವಶಾಲಿ ವ್ಯಕ್ತಿಗಳು ಹೊಡೆಯುತ್ತಿದ್ದ

ಪುಟ 2 ನೋಡಿ



| ಕ್ರ. ಸಂ. | ಹೆಸರು | ಚಿಹ್ನೆ |
|---|---|---|
| 5 | ಜಿ.ವಿ. ಶ್ರೀರಾಮರೆಡ್ಡಿ |  |

ಇವರ ಕುಡುಗೋಲು, ಸುತ್ತಿಗೆ, ನಕ್ಷತ್ರದ ಗುರುತಿಗೆ ಮತ ನೀಡಿ

# ಜಿ.ವಿ. ಶ್ರೀರಾಮರೆಡ್ಡಿಯವರನ್ನು ಬೆಂಬಲಿಸಲು ಮನವಿ...

**ಮೊದಲನೇ ಪುಟದಿಂದ**

ಲೂಟಿಯ ವಿರುದ್ಧ ಅವರು ವಿಧಾನ ಸಭೆಯಲ್ಲಿ 1997 ನೇ ಇಸವಿಯಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಪರಿಣಾಮವಾಗಿ ಸರ್ಕಾರದ ಖಜಾನೆಗೆ ವಾರ್ಷಿಕವಾಗಿ ಸುಮಾರು 360 ಕೋಟಿ ರೂಪಾಯಿಗಳ ಉಳಿತಾಯವಾಗಿದೆ.

- ಬೆಂಗಳೂರು-ಮೈಸೂರು ನಡುವಿನ ದುಬಾರಿ ಶುಲ್ಕದ ಉದ್ದೇಶಿತ 'ನೈಸ್ ಕಾರಿಡಾರ್ ಹೆದ್ದಾರಿ' ನಿರ್ಮಾಣದ ಸಲುವಾಗಿ ರೈತರಿಂದ ಅಕ್ರಮವಾಗಿ ವಶಪಡಿಸಿಕೊಂಡ ಜಮೀನನ್ನು ಕುಖ್ಯಾತ ನೈಸ್ ಸಂಸ್ಥೆಗೆ ಸರ್ಕಾರವು ಅವರೊಂದಿಗೆ ಶಾಮೀಲಾಗಿ ದುಗ್ಗಾಣಿ ಬೆಲೆಗೆ ಹಸ್ತಾಂತರಿಸಿರುವುದನ್ನು ಕಾಂ. ಜಿವಿಎಸ್ ಅವರು ವಿಧಾನ ಸಭೆಯಲ್ಲಿ ಬಯಲಿಗೆಳೆದಿದ್ದಾರೆ. ವಿಧಾನ ಸಭೆಯಲ್ಲಿ ಅವರು ಮಧ್ಯಪ್ರವೇಶ ಮಾಡಿದ ಇನ್ನೊಂದು ಮಹತ್ವದ ವಿಷಯವೆಂದರೆ ಅದು ಗಣಿದಣಿಗಳ ಎಣೆ ಇಲ್ಲದ ಲೂಟಿಯ ವಿಷಯ. ಯಡಿಯೂರಪ್ಪ ನೇತೃತ್ವದ ಭಾಜಪ ಸರ್ಕಾರದ ಅವಧಿಯಲ್ಲಿ ಈ ಲೂಟಿಯು ಪರಮಾವಧಿ ತಲುಪಿದ್ದನ್ನು ಮತ್ತು ಈ ಸಮಸ್ಯೆಯು ರಾಜ್ಯ ಸರ್ಕಾರವನ್ನು ಭಾಧಿಸುತ್ತಿರುವುದು ಇನ್ನೂ ತಪ್ಪಿಲ್ಲ ಎಂಬುದನ್ನು ಜ್ಞಾಪಿಸಿಕೊಳ್ಳಬಹುದು.
- ಬೆಂಗಳೂರು ನಗರದಲ್ಲಿರುವ ಸರ್ಕಾರಿ ಭೂಮಿಯನ್ನು ಅನೇಕ ಪ್ರಭಾವಿ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿರುವುದನ್ನು ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಿದ ಮೊದಲಿಗ ಕಾಂ. ಜಿವಿಎಸ್. ಅವರ ಸತತ ಪ್ರಯತ್ನದಿಂದಾಗಿ, ಎ.ಟಿ.ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ವಿಧಾನಮಂಡಲದ ಜಂಟಿ ಸಮಿತಿಯ ನೇಮಕವಾಯಿತು. ಕಾಂ. ಜಿವಿಎಸ್ ಆ ಸಮಿತಿಯ ಸದಸ್ಯರಾಗಿದ್ದರು. ಅಂದಾಜು ನಲವತ್ತು ಸಾವಿರ ಕೋಟಿ ರೂಪಾಯಿಗಳ ಬೆಲೆಬಾಳುವ ಸುಮಾರು 33,000 ಎಕರೆ ಸರ್ಕಾರಿ ಜಮೀನು ಒತ್ತುವರಿಯಾಗಿರುವುದನ್ನು ಈ ಸಮಿತಿಯ ವರದಿಯು ಬಯಲು ಮಾಡಿದೆ.
- ಅಂಗನವಾಡಿ ನೌಕರರು, ಬಿಸಿಯೂಟ ಕೆಲಸಗಾರರು, ಗ್ರಾಮ ಪಂಚಾಯತ್ ನೌಕರರು, ಹೀಗೆ ಗೌರವಧನದ ಹೆಸರಿನಲ್ಲಿ ಅತಿ ಕಡಿಮೆ ವೇತನಕ್ಕೆ ದುಡಿಸಿಕೊಳ್ಳಲಾಗುತ್ತಿರುವ ಸರ್ಕಾರದ ವಿವಿಧ ಇಲಾಖೆಗಳ ನೌಕರರು ಮತ್ತು ಅಸಂಘಟಿತ ಕಾರ್ಮಿಕರ ಪ್ರಶ್ನೆಗಳ ಪರವಾಗಿ ಕಾಂ. ಜಿ.ವಿ. ಶ್ರೀರಾಮರೆಡ್ಡಿಯವರು ವಿಧಾನ ಸಭೆಯಲ್ಲಿಯೂ ದನಿ ಎತ್ತಿದ್ದಾರೆ ಮತ್ತು ಈ ವಿಭಾಗದ ಕಾರ್ಮಿಕರು ನೌಕರರು ನಿರಂತರವಾಗಿ ನಡೆಸುತ್ತಿರುವ ಹೋರಾಟದಲ್ಲಿ ಪಾಲ್ಗೊಂಡು ಸತತವಾದ ಬೆಂಬಲ ನೀಡುತ್ತಾ ಬರುತ್ತಿದ್ದಾರೆ.

# ಚಿಕ್ಕಬಳ್ಳಾಪುರ ಕ್ಷೇತ್ರ – ಅತಿ ಮುಖ್ಯ ಸಮಸ್ಯೆಗಳು

ಅನುಗಾಲವೂ ಬರಪೀಡಿತ ಒಂಭತ್ತು ಜಿಲ್ಲೆಗಳಲ್ಲಿ ಚಿಕ್ಕಬಳ್ಳಾಪುರವೂ ಒಂದು. ಅಲ್ಲಿನ ಅಂತರ್ಜಲದ ಮಟ್ಟವು ಒಂದು ಸಾವಿರ ಅಡಿಗಳಿಗಿಂತಲೂ ಹೆಚ್ಚಿನ ಆಳಕ್ಕೆ ಇಳಿದಿದೆ. ಈ ಪ್ರದೇಶವು ಮರುಭೂಮಿಯಾಗುವ ಅಪಾಯವನ್ನು ಮನಗಂಡ ಕಾಂ. ಜಿವಿಎಸ್ ಅವರ ಮುತುವರ್ಜಿಯಲ್ಲಿ ಸಿಪಿಐ(ಎಂ) ಪಕ್ಷವು ಶಾಶ್ವತ ನೀರಾವರಿ ಯೋಜನೆಗಾಗಿ ಒಂದು ಜನಾಂದೋಲನವನ್ನು ಆರಂಭಿಸಿದೆ. 'ಶಾಶ್ವತ ನೀರಾವರಿ ಹೋರಾಟ ಸಮಿತಿ'ಯ ರಚನೆಯಾಗಿ ಅದು ಜಿಲ್ಲೆಯ ಎಲ್ಲ ವಿಭಾಗದ ಜನರನ್ನು ಚಳುವಳಿಗೆ ಅಣಿನೆರೆಸಲು ಮುಂದಾಗಿದೆ. ಈಗ ಎಲ್ಲ ರಾಜಕೀಯ ಮುಖಂಡರು ಮತ್ತು ಎಲ್ಲ ರಾಜಕೀಯ ಪಕ್ಷಗಳೂ ಶಾಶ್ವತ ನೀರಾವರಿಯ ಬಗ್ಗೆ ಮಾತನಾಡಲೇಬೇಕಾಗಿದೆ. 2001 ರಲ್ಲಿ ಪಕ್ಷಬೇಧವಿಲ್ಲದೆ ಸುಮಾರು 10,000 ಜನರು ಚಿಕ್ಕಬಳ್ಳಾಪುರದಿಂದ ಬೆಂಗಳೂರಿಗೆ ಕಾಲ್ನಡಿಗೆಯಲ್ಲಿ ಸಾಗಿ ಬಂದ 'ಬೃಹತ್ ಪಾದಯಾತ್ರೆ' ಶಾಶ್ವತ ನೀರಾವರಿ ಹೋರಾಟದಲ್ಲಿ ಒಂದು ಮಹತ್ವದ ಮೈಲಿಗಲ್ಲಾಗಿದೆ. ಜಿ.ವಿ. ಶ್ರೀರಾಮರೆಡ್ಡಿಯವರು ಈ ಹೋರಾಟದ ಹಿಂದಿನ ಪ್ರಧಾನ ಚಾಲಕ ಶಕ್ತಿಯಾಗಿದ್ದರು ಎಂಬುದನ್ನು ವಿಶೇಷವಾಗಿ ಚಿಕ್ಕಬಳ್ಳಾಪುರ ಕ್ಷೇತ್ರದ ಜನತೆ ಗಮನಿಸಬೇಕಿದೆ.

### ಗೌರಿಬಿದನೂರು

ಜಿಲ್ಲೆಯಲ್ಲಿ ಕಳೆದ ಅನೇಕ ವರ್ಷಗಳಿಂದ ನಡೆಸಿದ ಭೂ ಹೋರಾಟಗಳೂ ಜನತೆಯ ಮನದಲ್ಲಿವೆ. ಗೌರಿಬಿದನೂರು ತಾಲೂಕಿನ ಕಾದಲವೇಣಿಯಲ್ಲಿ ಸುದೀರ್ಘ ಕಾಲ ನಡೆದ ಭೂ ಹೋರಾಟ ಇತ್ತೀಚಿನ ವರ್ಷಗಳಲ್ಲಿ ನಡೆದಂತಹ ಒಂದು ಮಹತ್ವದ ಹೋರಾಟವಾಗಿದೆ. ಜಿ.ವಿ.ಎಸ್. ಅವರು ಎರಡು ಬಾರಿ ಬಾಗೇಪಲ್ಲಿ ಶಾಸಕರಾಗಿದ್ದ ಸಂದರ್ಭದಲ್ಲಿ ಮಾಡಿದ ಕೆಲಸಗಳು ಇಂದಿಗೂ ಮಾದರಿಯಾಗಿ ಉಳಿದಿದ್ದು ಜನತೆ ಇಂದಿಗೂ ಅವನ್ನು ನೆನಪಿಸಿಕೊಳ್ಳುತ್ತಿದ್ದಾರೆ. ಚಿತ್ರಾವತಿ ಅಣೆಕಟ್ಟು ಮೂಲಕ ಶುದ್ಧ ಕುಡಿಯುವ ನೀರು ಪೂರೈಕೆ ಯೋಜನೆ ಅನ್ನುಷ್ಠಾನ ಅವುಗಳಲ್ಲಿ ಒಂದು ಸ್ಮರಣೀಯ ಕಾರ್ಯವಾಗಿದೆ.

### ದೊಡ್ಡ ಬಳ್ಳಾಪುರ: ನೇಕಾರರು-ರೈತ ಕಾರ್ಮಿಕರ ಪರ ಹೋರಾಟಗಳು ದಲಿತರ ಅಭ್ಯುದಯಕ್ಕಾಗಿ ಚಳುವಳಿಗಳು

ದೊಡ್ಡಬಳ್ಳಾಪುರದಲ್ಲಿ ನೆಯ್ಗೆ ಉದ್ದಿಮೆಯ ಉಳಿವಿಗಾಗಿ ಹಲವಾರು ಹೋರಾಟಗಳನ್ನು ನಡೆಸಿರುವ ಹೆಮ್ಮೆ ಸಿಪಿಐ(ಎಂ) ಪಕ್ಷದ್ದು. ನೇಕಾರರ ಹೋರಾಟ ಸಮಿತಿಯ ಮುಂಖಂಡರಾಗಿ ಸಿಪಿಐ(ಎಂ) ಮುಖಂಡರು ಸಮಸ್ಯೆಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಚಳುವಳಿಗೆ ನೇತೃತ್ವ ನೀಡಿದರು. ರೇಷ್ಮೆ ನೂಲಿನ ಬೆಲೆ ವಿಪರೀತ ಏರಿ ನೇಕಾರರು ತೊಂದರೆಗೆ ಸಿಲುಕಿದಾಗ ಅದರ ವಿರುದ್ದ ಹೋರಾಟ, ನೇಯ್ದ ರೇಷ್ಮೆ ಬಟ್ಟೆಗೆ ಮಾರುಕಟ್ಟೆ ವ್ಯವಸ್ಥೆ ಸಿಗುವಂತೆ ಮಾಡಬೇಕೆಂದು ಸಹ ಯಶಸ್ವಿ ಹೋರಾಟ ನಡೆಸಲಾಗಿದೆ.

ನೇಕಾರರ ಸಂಕಷ್ಟಗಳ ಪರಿಹಾರದ ದೃಷ್ಟಿಯಿಂದ ನೇಕಾರರ ವಿದ್ಯುತ್‌ಗೆ ಸಹಾಯಧನ ನೀಡಬೇಕೆಂಬ ಬೇಡಿಕೆಯಿಂದ ಇಂದು ನೇಕಾರರ ವಿದ್ಯುತ್ ಬಿಲ್‌ನಲ್ಲಿ ಶೇ. 60 ಸಬ್ಸಿಡಿ ಸಿಗುತ್ತಿದೆ. ಈ ಸಂಬಂಧದ ಹೋರಾಟಗಳಲ್ಲಿ ಸಿಪಿಐ(ಎಂ) ಮುಖಂಡರಾಗಿ ಶಾಸಕರಾಗಿ ಜಿ.ವಿ ಶ್ರೀರಾರೆಡ್ಡಿಯವರು ನೇಕಾರರ ಚಳುವಳಿಯೊಂದಿಗಿದ್ದು ಬೆಂಬಲ ನೀಡಿದ್ದಲ್ಲದೇ ಅಂದಿನ ಹಣಕಾಸು ಸಚಿವ ಸಿದ್ದರಾಮಯ್ಯನವರೊಂದಿಗಿನ ಮಾತುಕತೆಯಲ್ಲೂ ಪಾಲ್ಗೊಂಡು ನೇಕಾರರ ಬೇಡಿಕೆಗಳ ಪರವಾಗಿ ಶ್ರಮಿಸಿದ್ದಾರೆ.

ದೊಡ್ಡಬಳ್ಳಾಪುರದಲ್ಲಿ ನೀರಿನ ಖಾಸಗೀಕರಣ ಮಾಡುವ ನಗರಸಭೆಯ ನೀತಿಯ ವಿರುದ್ದ, ಸರ್ಕಾರದ ಕಛೇರಿಗಳಲ್ಲಿ ಲಂಚಕೋರತನದ ವಿರುದ್ದ, ಶಾಶ್ವತ ನೀರಾವರಿ ಯೋಜನೆಯ ಜಾರಿಗಾಗಿ ಆಗ್ರಹಿಸಿ ನಾನಾ ಹೋರಾಟಗಳನ್ನು ನಡೆಸಲಾಗಿದೆ. ದೊಡ್ಡಬಳ್ಳಾಪುರ ತಾಲ್ಲೂಕಿನ ಕನ್ನಮಂಗಲ ಗ್ರಾಮದ ಬಡ ಬಾಲಕಿಯ ಸಾಮೂಹಿಕ ಅತ್ಯಾಚಾರ ನಡೆದ ಸಂದರ್ಭದಲ್ಲಿ ಬಾಲಕಿಗೆ ನ್ಯಾಯಕ್ಕಾಗಿ ಚಳುವಳಿ ನಡೆಸಲಾಗಿದೆ. ದೊಡ್ಡಬಳ್ಳಾಪುರದಲ್ಲಿ ಎಸ್ಸಿ, ಎಸ್ಟಿ ವಿದ್ಯಾರ್ಥಿನಿಲಯಗಳಲ್ಲಿ ಅಗತ್ಯ ಮೂಲಸೌಕರ್ಯ ಕೊರತೆಯನ್ನು ನೀಗಿಸಬೇಕು ಎಂದು ಪ್ರತಿಭಟನೆ ನಡೆಸಲಾಗಿದೆ.

### ದೇವನಹಳ್ಳಿ: ರೇಷ್ಮೆ ಉದ್ದಿಮೆ ಉಳಿಗಾಗಿ ಹೋರಾಟಗಳು

ರೇಷ್ಮೆ ದೇವನಹಳ್ಳಿ ತಾಲ್ಲೂಕಿನ ಒಂದು ಜೀವನಾಡಿ ಉದ್ದಿಮೆಯಾಗಿದೆ. ಕೇಂದ್ರ ಸರ್ಕಾರವು ಆಮದು ರೇಷ್ಮೆಗೆ ವಿಧಿಸುತ್ತಿದ್ದ ಸುಂಕವನ್ನು ಶೇ. 35 ರಿಂದ ಶೇ. 5 ಕ್ಕೆ ಇಳಿಸಿ ರೇಷ್ಮೆ ರೈತರನ್ನು ಸಂಕಷ್ಟಕ್ಕೆ ತಳ್ಳಿದಾಗ ಈ ರೈತದ್ರೋಹಿ ನೀತಿಯ ವಿರುದ್ದ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಸಿಪಿಐ(ಎಂ) ಪ್ರತಿಭಟಿಸಿ ತೀವ್ರವಾದ ಚಳುವಳಿ ನಡೆಸಿವೆ. ರಾಜ್ಯದ ನಾನಾ ಜಿಲ್ಲೆಗಳ ಹೋರಾಟಗಳಲ್ಲದೇ ಕೇಂದ್ರ ಸಚಿವರಾದ ವೀರಪ್ಪ ಮೊಯ್ಲಿ-ಕೆ.ಎಚ್. ಮುನಿಯಪ್ಪ ಅವರುಗಳ ಕಚೇರಿಗಳ ಮುಂದೆ ನಡೆದ ಪ್ರತಿಭಟನೆಗಳನ್ನೂ ಈ ಸಂದರ್ಭದಲ್ಲಿ ಜನತೆ ನೆನಪಿಸಿಕೊಳ್ಳಬೇಕಿದೆ.

### ರೈತರ ಭೂಮಿಗೆ ಸೂಕ್ತ ಬೆಲೆಗೆ ಆಗ್ರಹಿಸಿ ಚಳುವಳಿ

ದೇವನಹಳ್ಳಿ-ದೊಡ್ಡಬಳ್ಳಾಪುರಗಳ ನಡುವಿನ 'ಐಪಿಐಆರ್' ಯೋಜನೆಗೆ ಭೂ ಸ್ವಾಧೀನ ಮಾಡಿಕೊಳ್ಳುವ ಸಂದರ್ಭದಲ್ಲಿ ರೈತರ ಭೂಮಿಯ ನ್ಯಾಯಬದ್ಧವಾದ ಪರಿಹಾರ ನೀಡಬೇಕೆಂದು ಮತ್ತು ಸೂಕ್ತ ಪುನರ್ವಸತಿ ಒದಗಿಸಬೇಕೆಂದು ಆಗ್ರಹಿಸಿ ಚಳುವಳಿಗಳನ್ನು ನಡೆಸಲಾಗಿದೆ.

ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕಾಗಿ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದ ರೈತರಿಂದ ಯಾವುದೇ ಪರಿಹಾರ ನೀಡದೇ ಭೂಮಿ ಕಿತ್ತುಕೊಂಡ ಸಂದರ್ಭದಲ್ಲಿ ರೈತರಿಗೆ ನ್ಯಾಯಕ್ಕಾಗಿ ಆಗ್ರಹಿಸಿ ಚಳುವಳಿ ನಡೆಸಲಾಗಿದೆ.

### ಹೊಸಕೋಟೆ : ಬಲಾತ್ಕಾರದಿಂದ ರೈತರ ಭೂಮಿ ಸ್ವಾಧೀನದ ವಿರುದ್ದ ಚಳುವಳಿ

ಹೊಸಕೋಟೆಯ ನಂದಗುಡಿ ಮತ್ತು ಸುತ್ತಮುತ್ತಲ ಭಾಗಗಳಲ್ಲಿ ಟೌನ್‌ಶಿಪ್ ಹೆಸರಿನಲ್ಲಿ ರೈತರಿಂದ ಬಲಾತ್ಕಾರವಾಗಿ ಭೂಮಿ ಕಿತ್ತುಕೊಳ್ಳುವ ಸರ್ಕಾರದ ಯೋಜನೆಯ ವಿರುದ್ದ ರೈತರ ಚಳುವಳಿಗೆ ಸಿಪಿಐ(ಎಂ) ಬೆಂಬಲವಾಗಿ ನಿಂತಿದೆ. ರೈತರಿಗೆ ಕ್ಯಾರೇಟ್, ಮೂಲಂಗಿ ಇತ್ಯಾದಿ ಕಳಪೆ ಬೀಜ ಪೂರೈಸಿದ ಬೀಜ ಕಂಪನಿಗಳ ವಂಚನೆ ಪ್ರತಿಭಟಿಸಿ ಪರಿಹಾರವನ್ನು ಪಡೆದ ಯಶಸ್ವಿ ಹೋರಾಟದ ಹಿಂದೆ ಸಿಪಿಐ(ಎಂ) ನಾಯಕರ ಪರಿಶ್ರಮವಿದೆ.

ಹಿಂದೆ ವಿದ್ಯುತ್ ಖಾಸಗೀಕರಣ ನೀತಿಯ ವಿರುದ್ದ ರೈತರ ಪಂಪ್‌ಸೆಟ್‌ಗೆ ಮೀಟರ್ ಅಳವಡಿಸುವ ನೀತಿಗಳ ವಿರುದ್ದ ಬೆಸ್ಕಾಂ ಕಛೇರಿ ಮುತ್ತಿಗೆ ಮುಂತಾದ ತೀವ್ರ ಹೋರಾಟಗಳಲ್ಲಿ ರೈತ ಚಳುವಳಿಕಾರರಾಗಿ ಸಿಪಿಐ(ಎಂ) ಮುಖಂಡರು ಪ್ರಮುಖ ಪಾತ್ರವಹಿಸಿ ಚಳುವಳಿಯನ್ನು ಯಶಸ್ವಿಗೊಳಿಸಿದ್ದಾರೆ.

ಹೊಸಕೋಟೆಯ ನಾನಾ ಕಾರ್ಖಾನೆಗಳಲ್ಲಿ ಕಾರ್ಮಿಕರ ಶೋಷಣೆಯ ವಿರುದ್ದ, ಕಾರ್ಮಿಕ ಕಾನೂನುಗಳ ಜಾರಿಗಾಗಿ ನಡೆದ ಹೋರಾಟಗಳಲ್ಲಿ ಸಹ ಕಾರ್ಮಿಕ ನಾಯಕರಾಗಿ ಸಿಪಿಐ(ಎಂ) ಮುಖಂಡರು ನಿರಂತರವಾಗಿ ನೇತೃತ್ವದ ಪಾತ್ರ ವಹಿಸುತ್ತ ಬರುತ್ತಿದ್ದಾರೆ.

### ಯಲಹಂಕ : ನೀರಿನ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ಆಗ್ರಹ

ಕುಡಿಯುವ ನೀರು ಯಲಹಂಕ ಕ್ಷೇತ್ರದ ಒಂದು ಜ್ವಲಂತ ಸಮಸ್ಯೆಯಾಗಿದೆ. ಡಾ. ಪರಮಶಿವಯ್ಯ ವರದಿಯ ಸಮಗ್ರ ಜಾರಿ ಮತ್ತು ಆ ಮೂಲಕ ಪಶ್ಚಿಮಘಟ್ಟಗಳಿಂದ ಈ ಭಾಗಕ್ಕೆ ನೀರು ತರುವುದೇ ಈ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ಇರುವ ದಾರಿಯಾಗಿದೆ. ಈ ಕ್ರಮಕ್ಕಾಗಿ ಸಿಪಿಐ(ಎಂ) ಪಕ್ಷವು ನಿರಂತರ ಹೋರಾಟಗಳನ್ನು ನಡೆಸುತ್ತ ಬರುತ್ತಿದೆ.

ಯಲಹಂಕ ಕ್ಷೇತ್ರದ ವಿವಿಧ ಕಾರ್ಖಾನೆಗಳಲ್ಲಿ ಕಾರ್ಮಿಕರಿಗೆ ವೇತನ ಹೆಚ್ಚಳ, ಕಾರ್ಮಿಕ ಸೌಲಭ್ಯಗಳ ಜಾರಿ ಮುಂತಾದ ನಾನಾ ಪ್ರಶ್ನೆಗಳಲ್ಲಿ ಕಾರ್ಮಿಕ ಮುಖಂಡರಾಗಿ ಸಿಪಿಐ(ಎಂ) ನಾಯಕರು ನಿರಂತರವಾಗಿ ಶ್ರಮಿಸುತ್ತಾ ಬರುತ್ತಿದ್ದಾರೆ. ಭೂಗಳ್ಳರಿಂದ ಮರುವಶಕ್ಕೆ ಪಡೆದ ಸರ್ಕಾರಿ ಭೂಮಿಯ ಹರಾಜು ಹಾಕುವುದರ ವಿರುದ್ದ ಮತ್ತೂ ಆ ಭೂಮಿಯಲ್ಲಿ ಬಡವರಿಗೆ, ಆಟೋ ಚಾಲಕರು ಸೇರಿದಂತೆ ದುಡಿಯುವ ಜನರಿಗೆ ಉಚಿತ ನವೇಶನಗಳನ್ನು ಹಂಚಬೇಕೆಂದು ಸಿಪಿಐ(ಎಂ) ಪಕ್ಷವು ಚಳುವಳಿ ನಡೆಸಿದೆ.

ಎಲ್ಲ ಧರ್ಮ, ಜಾತಿ, ಮತ ಮತ್ತು ಪಂಗಡಗಳಿಗೆ ಸೇರಿದ ಜನರ ರಕ್ಷಣೆಗೆ ಸಿಪಿಐ(ಎಂ) ಬದ್ಧವಾಗಿದೆ ಮತ್ತು ಮುಂಚೂಣಿಯಲ್ಲಿದೆ. ಕರ್ನಾಟಕದಲ್ಲಿ ದಲಿತರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಶೋಷಣೆಯ ವಿರುದ್ಧ ಸಿಪಿಐ(ಎಂ) ಸತತವಾಗಿ ಹೋರಾಡುತ್ತಿದೆ. ಅಲ್ಪ-ಸಂಖ್ಯಾತ ಮತ್ತು ಬಹು-ಸಂಖ್ಯಾತರ ಎರಡೂ ಕೋಮುಗಳ ಮತಾಂಧತೆಯ ವಿರುದ್ಧ ಹಾಗೂ ಮೂಢನಂಬಿಕೆಗಳ ವಿರುದ್ಧ, ಮಡೆಸ್ನಾನ ಮತ್ತು ಪಂಕ್ತಿಭೇದದಂತಹ ಪ್ರಗತಿ ವಿರೋಧಿ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಟ ಮಾಡಿರುವ ಸಿಪಿಐ(ಎಂ) ಪಕ್ಷವು ವಿಶ್ವಾಸಾರ್ಹವಾದ ಒಂದು ಚಾರಿತ್ರ್ಯ ಹೊಂದಿದೆ. ಸಿಪಿಐ(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿರುವ ಕಾಂ. ಜಿವಿಎಸ್ ಈ ಎಲ್ಲ ಹೋರಾಟಗಳನ್ನು ಮುನ್ನೆಡೆಸುತ್ತಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ



ಮಡೆಸ್ನಾನ, ಪಂಕ್ತಿಭೇದ, ಮೂಢನಂಬಿಕೆ ಆಚರಣೆಗಳ ವಿರುದ್ಧ ರಾಜ್ಯವ್ಯಾಪಿ ವ್ಯಾಪಕ ಪ್ರತಿಭಟನಾ ಚಳುವಳಿ– ಚಿಕ್ಕಬಳ್ಳಾಪುರದ ಸುಬ್ಬರಾಯ ಪೇಟೆಯ ಸುಬ್ರಮಣ್ಯ ದೇವಸ್ಥಾನದಲ್ಲಿ ಮಡೆಸ್ನಾನ ಪದ್ಧತಿ ಆಚರಣೆ ವಿರುದ್ಧ ಹೋರಾಟ ←

**ಶಾಶ್ವತ ನೀರಾವರಿ ಯೋಜನೆ : ಡಾ. ಪರಮಶಿವಯ್ಯ ವರದಿ ಸಮಗ್ರ ಜಾರಿಗಾಗಿ ಬೃಹತ್ ರ್‍ಯಾಲಿ**

ಕೋಲಾರ–ಚಿಕ್ಕಬಳ್ಳಾಪುರ ಅವಿಭಜಿತ ಶಾಶ್ವತ ನೀರಾವರಿ ಹೋರಾಟ ಸಮಿತಿ ನೇತೃತ್ವದಲ್ಲಿ ಡಾ. ಪರಮಶಿವಯ್ಯ ನೀಡಿರುವ ವರದಿಯ ಸಮಗ್ರ ಜಾರಿಗಾಗಿ ಆಗ್ರಹಿಸಿ ಬೃಹತ್ ರ್‍ಯಾಲಿ–ಚಿಕ್ಕಬಳ್ಳಾಪುರ ↓





↑ ಸೌಜನ್ಯ ಮೇಲಿನ ಅತ್ಯಾಚಾರ–ಕೊಲೆ ಖಂಡಿಸಿ ಧರ್ಮಸ್ಥಳದ 450 ಕ್ಕೂ ಹೆಚ್ಚಿನ 'ಅಸಹಜ ಸಾವುಗಳ' ಕುರಿತು ಸಿಬಿಐ ತನಿಖೆಗೆ ಆಗ್ರಹಿಸಿ ನಡೆದ ಬೃಹತ್ ಪ್ರತಿಭಟನೆ–ಪಾದಯಾತ್ರೆಗೆ ಚಾಲನೆ ನೀಡುತ್ತಿರುವ ಜಿ.ವಿ.ಎಸ್.

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ತಿಮ್ಮಂಪಲ್ಲಿ ಪಂಚಾಯ್ತಿ ಎದುರು ಉದ್ಯೋಗ ಖಾತ್ರಿ ಕೆಲಸಕ್ಕಾಗಿ ಒತ್ತಾಯಿಸಿ ನಡೆದ ಪ್ರತಿಭಟನೆಯಲ್ಲಿ ಜಿ.ವಿ.ಎಸ್. ↓





↑ ಮನೆಯಿಲ್ಲದ ಬಡವರಿಗೆ ವಸತಿ ನಿವೇಶನಕ್ಕಾಗಿ ಆಗ್ರಹಿಸಿ ಚಿಕ್ಕಬಳ್ಳಾಪುರದಲ್ಲಿ ನಡೆದ ಹೋರಾಟದಲ್ಲಿ ಜಿ.ವಿ.ಎಸ್.

## ಬೆಲೆ ಏರಿಕೆ ವಿರುದ್ಧ

ಪೆಟ್ರೋಲ್–ಡೀಸೆಲ್ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರುದ್ಧ ಮತ್ತು ಎಡಪಕ್ಷಗಳ ಹತ್ತು ಅಂಶಗಳ ಪರ್ಯಾಯ ರ್‍ಯಾಲಿಯಲ್ಲಿ ಜಿ.ವಿ.ಎಸ್. →





ನಾಮಪತ್ರ ಸಲ್ಲಿಸುತ್ತಿರುವ ಜಿ.ವಿ.ಶ್ರೀರಾಮರೆಡ್ಡಿ

"ಕಾಂಗ್ರೆಸ್, ಬಿಜೆಪಿ ಬಂಡವಾಳಶಾಹಿ ಧೋರಣೆ ಇರುವ ಪಕ್ಷಗಳು ಸಿಪಿಐ(ಎಂ) ನ್ನು ವ್ಯವಸ್ಥಿತವಾಗಿ ಮೂಲೆಗುಂಪು ಮಾಡುವ ಹುನ್ನಾರ ನಡೆಯುತ್ತಿದೆ. ಕಾರಣ ನಾವು ದುಡಿಯುವ ವರ್ಗವನ್ನು ಪ್ರತಿನಿಧಿಸುತ್ತೇವೆ. ಇತರೇ ರಾಜಕೀಯ ಪಕ್ಷಗಳು ಬಂಡವಾಳಶಾಹಿಗಳನ್ನು, ಹೂಡಿಕೆದಾರರನ್ನು ಪ್ರತಿನಿಧಿಸುತ್ತವೆ.

– ಜಿ.ವಿ.ಶ್ರೀರಾಮರೆಡ್ಡಿ
ಸಿಪಿಐ(ಎಂ) ಅಭ್ಯರ್ಥಿ



# ಮತದಾನಕ್ಕೂ ಮುನ್ನ ಒಮ್ಮೆ ಯೋಚಿಸಿ

## ನಿಮಗಿದು ತಿಳಿದಿರಲಿ

- ಶೇ. 36 ಮಹಿಳೆಯರು, ಶೇ. 34 ರಷ್ಟು ಪುರುಷರು, 5 ವರ್ಷದೊಳಗಿನ ಶೇ. 48 ಮಕ್ಕಳು ಅಪೌಷ್ಟಿಕತೆಗೀಡಾಗಿದ್ದಾರೆ.
- 1 ರಿಂದ 5 ತರಗತಿಗೆ ಬರುವುದರೊಳಗೆ ಶೇ. 29 ಮಕ್ಕಳು–1 ರಿಂದ 8 ನೇ ತರಗತಿಯೊಳಗೆ ಶೇ. 46. ಮಕ್ಕಳು ಶಾಲೆ ಬಿಡುತ್ತಿದ್ದಾರೆ.
- ಶೇ. 80 ಗ್ರಾಮೀಣ ಮತ್ತು ಶೇ. 64 ನಗರವಾಸಿ ಕುಟುಂಬಗಳು ಅಗತ್ಯಕ್ಕಿಂತ ಕಡಿಮೆ ಕ್ಯಾಲೋರಿಯ ಆಹಾರ ಸೇವಿಸುತ್ತಿದ್ದಾರೆ.
- ಶೇ. 80 ಹೊರರೋಗಿಗಳು ಮತ್ತು ಶೇ. 60 ಒಳರೋಗಿಗಳು ಖಾಸಗಿ ಆಸ್ಪತ್ರೆ–ನರ್ಸಿಂಗ್ ಹೋಂಗೆ ಮೊರೆ ಹೋಗಬೇಕಾಗಿದೆ.
- ಸಂಘಟಿತ ಕೈಗಾರಿಕೆಗಳ ಮೌಲ್ಯ ಉತ್ಪಾದನೆಯಲ್ಲಿ ಕಾರ್ಮಿಕರ ವೇತನದ ಪಾಲು ಜಗತ್ತಿನಲ್ಲೇ ಅತ್ಯಂತ ಕಡಿಮೆ ಇರುವುದು ಭಾರತದಲ್ಲಿ. 1981 ರಲ್ಲಿ 30.36 ಶೇಕಡಾವಾರು ಇದ್ದದ್ದು 2007–08 ರಲ್ಲಿ 10.6 ಶೇಕಡಕ್ಕೆ ಕುಸಿದಿದೆ.
- 2004–05 ಮತ್ತು 2011–15 ರ ನಡುವೆ ಮಹಿಳಾ ಕಾರ್ಮಿಕರ ಸಂಖ್ಯೆ 2 ಕೋಟಿ ಕುಸಿದಿದೆ.
- 1996 ರಿಂದ 2012 ರ ನಡುವೆ: 2 ಕೋಟಿ 90 ಲಕ್ಷ ರೈತರ ಆತ್ಮಹತ್ಯೆ
  1991–2011 ರ ನಡುವೆ: 1 ಕೋಟಿ 50 ಲಕ್ಷ ರೈತರು ವ್ಯವಸಾಯ ಬಿಟ್ಟಿದ್ದಾರೆ.
- ಡೀಸೆಲ್ ಬೆಲೆ: ಜನವರಿ 2004 ರಲ್ಲಿ ರೂ. 20 ರಿಂದ ಡಿಸೆಂಬರ್ 2013 ರಲ್ಲಿ ರೂ. 55 ಕ್ಕೆ ಏರಿದೆ. (ದೆಹಲಿ ದರಗಳಲ್ಲಿ)
- 2005–2010'ರ ನಡುವೆ ವಾರ್ಷಿಕ ಉದ್ಯೋಗ ಬೆಳವಣಿಗೆ ದರ ವಾರ್ಷಿಕ 1 ಶೇಕಡಕ್ಕಿಂತ ಕಡಿಮೆ.
- 15 ರಿಂದ 29'ರ ವಯೋಮಾನದ 33 ಕೋಟಿ ಯುವಜನರಲ್ಲಿ 4.38 ನಿರುದ್ಯೋಗಳು(ಶೇ. 13.3). ಪ್ರತಿ ಮೂರು ಪದವೀಧರರಲ್ಲಿ ಒಬ್ಬರು ನಿರುದ್ಯೋಗಿ.
- 2009–13 ರ ನಡುವೆ 91,000 ಕೋಟಿ ರೂ.ಗಳ ಸಾರ್ವಜನಿಕ ಉದ್ದಿಮೆಗಳ ಶೇರುಗಳನ್ನು ಮಾರಾಟ ಮಾಡಿಕೊಳ್ಳಲಾಗಿದೆ.
- ಕಳೆದ 3 ವರ್ಷಗಳಲ್ಲಿ ಆಹಾರ ಮತ್ತು ಇಂಧನದ ಮೇಲೆ ರೂ. 78,000 ಕೋಟಿ ಸಬ್ಸಿಡಿಗಳನ್ನು ಕಡಿತ ಮಾಡಲಾಗಿದೆ.
- ಜಾಗತಿಕ ಹಸಿವು ಸೂಚ್ಯಂಕದಡಿ ಜಗತ್ತಿನ 199 ರಾಷ್ಟ್ರಗಳಲ್ಲಿ ಭಾರತವು 94 ನೇ ಸ್ಥಾನದಲ್ಲಿದೆ.
- 2009–13ರ ನಡುವೆ ದೊಡ್ಡ ಬಂಡವಾಳಗಾರರು ಮತ್ತು ಕಾರ್ಪೊರೇಟ್ ಕಂಪನಿಗಳಿಗೆ ತೆರಿಗೆ ರಿಯಾಯತಿ ಇತ್ಯಾದಿ ರೂಪದಲ್ಲಿ 21 ಲಕ್ಷ ಕೋಟಿ ರೂ.ಗಳನ್ನು ಬಿಟ್ಟು ಕೊಡಲಾಗಿದೆ.
- 2003ರಲಿದ್ದ 13 ಶತಕೋಟ್ಯಾಧಿಪತಿಗಳು( ರೂ. 5000 ಕೋಟಿಗೂ ಹೆಚ್ಚು ನಿವ್ವಳ ಆಸ್ತಿ ಉಳ್ಳವರು) 2014 ರಲ್ಲಿ 56 ಕ್ಕೆ ಏರಿದ್ದಾರೆ.
- ಕಪ್ಪುಹಣ ರಾಷ್ಟ್ರೀಯ ಆಂತರಿಕ ಉತ್ಪನ್ನ(ಜಿಡಿಪಿ)ದ 50 ಶೇಕಡಕ್ಕೆ ತಲುಪಿದೆ. ನವ ಉದಾರವಾದಿ ಆರ್ಥಿಕ ನೀತಿಗಳ ಮುನ್ನ 25 ಲಕ್ಷ ಕೋಟಿ ರೂ.ಗಳಿದ್ದ ಕಪ್ಪುಹಣ ನೀತಿಗಳ ಜಾರಿಯ ನಂತರ 70 ಲಕ್ಷ ಕೋಟಿಗಳಿಗೆ ತಲುಪಿದೆ.
- ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅವಕಾಶದಿಂದಾಗಿ 4 ಕೋಟಿ ಜನರು ಬದುಕು ಕಳೆದುಕೊಳ್ಳಲಿದ್ದಾರೆ.

# ಬ್ರಹ್ಮಾಂಡ ಭ್ರಷ್ಟಾಚಾರದ ವಿರಾಟ ರೂಪ

**ಕಾಂಗ್ರೆಸ್ ನೇತೃತ್ವದ ಯುಪಿಎ–2 ಸರ್ಕಾರ**

- 2 ಜಿ ಟೆಲಿಕಾಂ ಹಗರಣ: 1.76 ಲಕ್ಷ ಕೋಟಿ ರೂ.ಗಳು
- ಕಲ್ಲಿದ್ದಲು ಹಗರಣ : 1.86 ಲಕ್ಷ ಕೋಟಿ ರೂ.ಗಳು
- ಕಾಮನ್ ವೆಲ್ತ್ ಕ್ರೀಡಾಕೂಟ ಹಗರಣ : 60.000 ಕೋಟಿ ರೂ.ಗಳು
- ಕೃಷ್ಣಾ ಗೋದಾವರಿ ಬೇಸಿನ್‌ನಲ್ಲಿ ರಿಲೆಯನ್ಸ್ ಕಂಪನಿಗೆ ರಿಯಾಯಿತಿ: 1 ಲಕ್ಷ ಕೋಟಿ ರೂ.ಗಳು
- ರಾಜ್ಯ ಬಿಜೆಪಿ ಸರ್ಕಾರದ ಸ್ವಜನಪಕ್ಷಪಾತ, ಭೂಹಗರಣ, ಗಣಿ ಹಗರಣ ಕುಖ್ಯಾತ
- **ಗುಜರಾತ್ ಬಿಜೆಪಿ ಸರ್ಕಾರದಿಂದ**
  → ಚದರ ಮೀಟರ್‌ಗೆ 1 ರಿಂದ 32 ರೂ. ನಂತೆ ರೈತರಿಂದ ಭೂ ಖರೀದಿ – ಅದಾನಿ ಗುಂಪಿಗೆ ರೂ. 10 ರಂತೆ 6700 ಹೆಕ್ಟೇರ್ ಮಾರಾಟ – ಬೊಕ್ಕಸಕ್ಕೆ 10,000 ಕೋಟಿ ರೂ. ನಷ್ಟ
  → ಅದಾನಿ ಗುಂಪಿನೊಂದಿಗೆ ವಿದ್ಯುತ್ ಖರೀದಿ ಒಪ್ಪಂದ – ಅದಾನಿಗೆ 1347 ಕೋಟಿ ರೂ. ಲಾಭ
  → ಕರಾವಳಿ ನಿಯಂತ್ರಣ ವಲಯದಲ್ಲಿ 2ಜಿ ಹಗರಣದ ಎಸ್ಸಾರ್ ಮತ್ತು ಟಾಟಾ ಟೆಲಿ ಕಮ್ಯೂನಿಕೇಷನ್ ಗೆ ಜಮೀನು ನೀಡಿಕೆ. 6228 ಕೋಟಿಗಳ ರೂ. ಬೆಲೆಯ ಭೂಮಿ
  → ನ್ಯಾನೊ ಕಾರ್ಖಾನೆ ಗುಜರಾತ್‌ಗೆ ತರಲು 33 ಸಾವಿರ ಕೋಟಿ ರೂ. ರಿಯಾಯಿತಿ

ಜನಶಕ್ತಿ
ಕನ್ನಡ ವಾರಪತ್ರಿಕೆ
ಏಪ್ರಿಲ್ 13, 2014



# ಸಿಪಿಐ(ಎಂ) ಚುನಾವಣಾ ಪ್ರಣಾಳಿಕೆ : ನವ ಉದಾರವಾದಿ ಆರ್ಥಿಕ ನೀತಿಗಳ ಜಾಡು ಬದಲಿಸಲು ಪರ್ಯಾಯ ಕ್ರಮಗಳು

## ಕಾರ್ಮಿಕರ ಕುರಿತು...

- ಕಾರ್ಮಿಕರಿಗೆ ಕನಿಷ್ಠ ವೇತನ ರೂ 10,000/–ಕ್ಕಿಂತ ಕಡಿಮೆ ಇಲ್ಲದಂತೆ ನಿಗದಿ
- ಎಲ್ಲ ಕಾರ್ಮಿಕ ಕಾಯಿದೆಗಳ ಕಟ್ಟುನಿಟ್ಟಿನ ಅನುಷ್ಠಾನ
- ಅಸಂಘಟಿತ ವಲಯದ ಕಾರ್ಮಿಕರ ಶಾಸನವನ್ನು ಉತ್ತಮಪಡಿಸುವುದು. ರಾಷ್ಟ್ರೀಯ ನಿಧಿಯ ಸ್ಥಾಪನೆ. ಸಾಕಷ್ಟು ಬಜೆಟ್ ನೀಡುವುದು.
- ಹೊಸ ಪೆನ್ಶನ್ ಯೋಜನೆ ಮತ್ತು ಪೆನ್ಶನ್ ನಿಧಿ ನಿಯಂತ್ರಣ ಹಾಗೂ ಅಭಿವೃದ್ಧಿ ಪ್ರಾಧಿಕಾರ ಕಾಯಿದೆ(ಪಿಎಫ್‌ಆರ್‌ಡಿಎ) ರದ್ದು. ಕೊನೆಯ ವೇತನದ ಕನಿಷ್ಠ ಶೇ. 50 ನಿವೃತ್ತಿ ವೇತನ ಖಾತ್ರಿ.
- ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಟನೆಗಳ ಮಾನ್ಯತೆ, ಎಲ್ಲ ಸಂಸ್ಥೆಗಳಲ್ಲಿಯೂ ಕಾರ್ಮಿಕ ಸಂಘಟನೆಗಳ ಮಾನ್ಯತೆಯನ್ನು ಕಡ್ಡಾಯಗೊಳಿಸುವುದು; ಸಂಘ ಕಟ್ಟಿಕೊಳ್ಳುವ ಸ್ವಾತಂತ್ರ್ಯ ಮತ್ತು ಸಾಮೂಹಿಕ ಚೌಕಾಸಿಯ ಹಕ್ಕು ಕುರಿತ ಐಎಲ್‌ಒದ ಅಧಿನಿರ್ಣಯ 87 ಮತ್ತು 98ರ ಜಾರಿ.
- ಗುತ್ತಿಗೆ ಕಾರ್ಮಿಕರ (ಕ್ರಮೀಕರಣ ಮತ್ತು ನಿಷೇಧ)ಕಾಯಿದೆಯ ಕಟ್ಟುನಿಟ್ಟಾದ ಅನುಷ್ಠಾನ, ಸಮಾನ ಕೆಲಸಕ್ಕೆ ಸಮಾನ ವೇತನ, ಖಾಯಮಾತಿಗೆ ಕ್ರಮ.
- ಎಲ್ಲ ಕ್ಷೇತ್ರಗಳಲ್ಲಿಯೂ ಸಹ ಮಹಿಳಾ ಕಾರ್ಮಿಕರಿಗೆ ಸಮಾನ ವೇತನ ಖಾತ್ರಿ ಮತ್ತು ಕಾರ್ಯಸ್ಥಳಗಳಲ್ಲಿ ಲೈಂಗಿಕ ಕಿರುಕುಳದ ವಿರುದ್ಧ ರಕ್ಷಣೆಗೆ ಕ್ರಮ.
- ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕರು, ಮಧ್ಯಾಹ್ನದೂಟದ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಅರೆಕಾಲಿಕ ಶಿಕ್ಷಕರು, ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯ ಸಿಬ್ಬಂದಿ ಇತ್ಯಾದಿ ವಿವಿಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳಲ್ಲಿ ಕೆಲಸ ಮಾಡುತ್ತಿರುವ ಎಲ್ಲರನ್ನೂ 'ಕಾರ್ಮಿಕ'ರೆಂದು ಮಾನ್ಯತೆ.

## ಮಹಿಳೆಯರ ಪ್ರಶ್ನೆಗಳು

- ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿಯ ಮಸೂದೆಯನ್ನು ಆದ್ಯತೆಯ ಮೇರೆಗೆ ಅಂಗೀಕಾರ.
- ಮಹಿಳೆಯರು ಮತ್ತು ಮಕ್ಕಳ ವಿರುದ್ಧ ಹಿಂಸಾಚಾರದಲ್ಲಿ ಭೀಕರ ಹೆಚ್ಚಳಕ್ಕೆ ಜವಾಬ್ದಾರರಾದವರನ್ನು ತಡೆಯಲು, ಶಿಕ್ಷಿಸಲು ಕ್ರಮಗಳ ಸರಣಿ ತರುವುದು.
- ಮರ್ಯಾದಾ ಹತ್ಯೆ ಮುಂತಾದ ಅಪರಾಧಗಳು, ಮಹಿಳೆಯರು ಮತ್ತು ಮಕ್ಕಳ ಮಾರಾಟದ ವಿರುದ್ಧ, ಜಂಟಿ ವೈವಾಹಿಕ ಆಸ್ತಿ ಹಕ್ಕುಗಳಿಗಾಗಿ, ಮಹಿಳೆಯರ ಮತ್ತು ಮಕ್ಕಳ ಜೀವನಾಂಶದ ಕಾನೂನನ್ನು ಬಲಗೊಳಿಸಲು ಪ್ರತ್ಯೇಕ ಕಾನೂನುಗಳ ರಚನೆ. ಪರಿತ್ಯಕ್ತ ಮಹಿಳೆಯರಿಗೆ ಭತ್ಯೆ, ಏಕಾಂಗಿ ಮಹಿಳೆಯರಿಗೆ, ವಿಧವೆಯರು ಮತ್ತು ಮಹಿಳೆ ಮುಖ್ಯಸ್ಥಳಾಗಿರುವ ಕುಟುಂಬಗಳಿಗೆ ವಿಶೇಷ ಯೋಜನೆಗಳು; ಸ್ವಸಹಾಯ ಗುಂಪುಗಳು ಮತ್ತು ಬ್ಯಾಂಕಿಂಗ್ ಸಂಸ್ಥೆಗಳ ನಡುವೆ ಸಂಪರ್ಕ ಇರುವಂತೆ ಮಾಡುವುದು ಮತ್ತು 4 ಶೇ. ಮೀರದ ಸಬ್ಸಿಡಿ ಬಡ್ಡಿದರಗಳ ಭರವಸೆ, ಅದರಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟು ಮಹಿಳೆಯರ ಸ್ವಸಹಾಯ ಗುಂಪುಗಳಿಗೆ ವಿಶೇಷ ರಿಯಾಯ್ತಿಗಳು, ಮನೆ ಕೆಲಸಗಾರರು ಮತ್ತು ಮನೆ ಆಧಾರಿತ ಕಾರ್ಮಿಕರನ್ನು ರಕ್ಷಿಸುವ ಶಾಸನ.

## ಯುವಜನರ

- ಉದ್ಯೋಗದ ಹಕ್ಕನ್ನು ಒಂದು ಸಂವಿಧಾನಿಕ ಹಕ್ಕಾಗಿಸುವುದು.
- ಉದ್ಯೋಗ ಒದಗಿಸುವುದು, ಇಲ್ಲವೇ ನಿರುದ್ಯೋಗ ಭತ್ಯೆ ನೀಡುವುದು.
- 'ರಾಷ್ಟ್ರೀಯ ಯುವನೀತಿ 2014' ನ್ನು ಯುವಜನರ ಹಿತಕ್ಕೆ ತಕ್ಕಂತೆ ತಿದ್ದುಪಡಿ ಮಾಡುವುದು.

## ಜಾತಿ ಪದ್ಧತಿ ವಿರುದ್ಧ ಸಮಾನತೆಗಾಗಿ..

- ಪರಿಶಿಷ್ಟ ಜಾತಿಗಳಿಗೆ ವಿಶೇಷ ಘಟಕ ಯೋಜನೆ(ಎಸ್‌ಸಿಪಿ) ಮತ್ತು ಬುಡಕಟ್ಟು ಉಪ ಯೋಜನೆ(ಟಿಎಸ್‌ಪಿ)ಗೆ ಒಂದು ಕೇಂದ್ರೀಯ ಶಾಸನದ ರಚನೆ; ಜನಸಂಖ್ಯೆಯ ಅನುಪಾತ ಆಧರಿಸಿ ಯೋಜನಾ ಮೊತ್ತಗಳನ್ನು ಒದಗಿಸುವುದು. ಯೋಜನೆಯ ಜಾರಿಯ ಉಸ್ತುವಾರಿಗೆ ಒಂದು ಸ್ಥಾಯೀ ಸಮಿತಿ ಸ್ಥಾಪನೆ.
- ಒಂದು ಸಮಯಬದ್ಧ ವಿಶೇಷ ನೇಮಕಾತಿ ಕ್ರಮದ ಮೂಲಕ ಹಿಂದೆ ತುಂಬದೇ ಉಳಿದಿರುವ ಎಲ್ಲ ಸ್ಥಾನಗಳನ್ನು, ಹುದ್ದೆಗಳನ್ನು ತುಂಬುವುದು; ಪರಿಶಿಷ್ಟ ಜಾತಿಗಳ ಯುವಜನರಿಗೆ ವೃತ್ತಿ ತರಬೇತಿ ಸೌಲಭ್ಯಗಳ ನಿರ್ಮಾಣ; ಎಲ್ಲ ಸ್ವಉದ್ಯೋಗ ಪರಿಶಿಷ್ಟ ಜಾತಿ ಉದ್ದಿಮೆಗಳಿಗೆ ಸಾಲ ಸೌಲಭ್ಯಗಳನ್ನು ಲಭ್ಯಗೊಳಿಸುವುದು ಮತ್ತು ಮಾರುಕಟ್ಟೆ ಸಂಪರ್ಕಗಳನ್ನು ಅಭಿವೃದ್ಧಿ ಪಡಿಸಲು ನೆರವು ನೀಡುವುದು;
- ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಒಳಗೊಂಡು ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಶೇ. 27 ಓಬಿಸಿ ಮೀಸಲಾತಿ ಜಾರಿ; ರಾಷ್ಟ್ರೀಯ ಆಯೋಗ ಬಲಪಡಿಸುವುದು.
- ಅಸ್ಪೃಶ್ಯತೆಯ ಆಚರಣೆಗಳ ವಿರುದ್ಧ ಬಲವಾದ ಮತ್ತು ಕಟ್ಟುನಿಟ್ಟಾದ ಶಿಕ್ಷೆ;
- ದಲಿತ ಕ್ರೈಸ್ತರು ಮತ್ತು ಮುಸ್ಲಿಮರಿಗೆ ಮೀಸಲಾತಿಯನ್ನು ವಿಸ್ತರಿಸುವುದು.
- ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಖಾಸಗೀ ವಲಯದಲ್ಲಿ ಮೀಸಲಾತಿ ನೀಡಲು ಒಂದು ಕೇಂದ್ರೀಯ ಶಾಸನ ತರುವುದು.
- ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳ ಮೇಲೆ ಅತ್ಯಾಚಾರಗಳ ತಡೆ ಕಾನೂನನ್ನು ಬಲಪಡಿಸಿ ಸೂಕ್ತ ತಿದ್ದುಪಡಿಗಳು.
- ಪಂಕ್ತಿಬೇಧ, ಅಸ್ಪೃಶ್ಯತೆ, ಮಡೆಸ್ನಾನ ನಿಷೇಧಕ್ಕೆ ಕ್ರಮ.

## ರೈತ-ಕೂಲಿಕಾರರ ಸಮಸ್ಯೆಗಳ ಪರಿಹಾರಕ್ಕೆ

- ಕೃಷಿಯು ಫಲದಾಯಕವಾಗುವಂತೆ ಮಾಡಲು, ರಾಷ್ಟ್ರೀಯ ಕೃಷಿಕರ ಆಯೋಗದ ರೈತರ ಪರ ಶಿಫಾರಸ್ಸುಗಳನ್ನು ಜಾರಿಗೊಳಿಸುವುದು.
- ಬೆಳೆಗಳಿಗೆ ಸ್ಥಿರವಾದ ಹಾಗೂ ಫಲದಾಯಕ ಬೆಲೆಗಳನ್ನು ಎಲ್ಲ ವೆಚ್ಚಗಳನ್ನೂ ಮತ್ತು ಬೆಳೆಗಳನ್ನೂ ಒಳಗೊಂಡಂತೆ ಖಾತರಿಗೊಳಿಸುವುದು,
- ಖರೀದಿ ಸೌಲಭ್ಯಗಳನ್ನು ವಿಸ್ತರಿಸಿ, ಎಲ್ಲ ಪ್ರದೇಶಗಳಲ್ಲಿ ಎಲ್ಲ ಬೆಳೆಗಳ ಖರೀದಿ ಸಕಾಲದಲ್ಲಿ, ಸಾಕಷ್ಟು ಪ್ರಮಾಣದಲ್ಲಿ ನಡೆಯುವಂತೆ ಖಾತರಿಗೊಳಿಸುವುದು.
- ಸಂಕಟದಲ್ಲಿರುವ ರೈತರಿಗೆ, ಬ್ಯಾಂಕ್‌ಗಳಂತಹ ಸಾಂಸ್ಥಿಕ ಮತ್ತು ಖಾಸಗೀ ಲೇವಾದೇವಿದಾರರಿಗೆ ಕೊಡಬೇಕಾದ ಸಾಲಗಳೂ ಸೇರಿದಂತೆ ಸಮಗ್ರವಾದ ಸಾಲ ಪರಿಹಾರ ಮತ್ತು ಸಾಲ ಮನ್ನಾ
- ಗೇಣಿದಾರರೂ, ಭಾಗ ಬೆಳೆಗಾರರೂ ಸೇರಿದಂತೆ ಎಲ್ಲ ರೈತರಿಗೂ, ಬೆಳೆಗಳು ಮತ್ತು ರಾಸುಗಳನ್ನು ಒಳಗೊಂಡ ಬೆಳೆ ವಿಮೆಯನ್ನು ರಚಿಸುವುದು, ಸಣ್ಣ ಮತ್ತು ಅಂಚಿನಲ್ಲಿರುವ ರೈತರಿಗೆ ಹೆಚ್ಚಿನ ಸಬ್ಸಿಡಿಗಳನ್ನು ಕೊಡುವುದು
- ಕೃಷಿ ಕಾರ್ಮಿಕರಿಗೆ ಕನಿಷ್ಟ ಕೂಲಿಗಳನ್ನು ದಿನಕ್ಕೆ 300ರೂ.ಗೆ ಏರಿಸುವುದು; ಮಹಿಳಾ ಕೃಷಿಕಾರ್ಮಿಕರಿಗೆ ಸಮಾನ ಕೂಲಿ ಸಿಗುವಂತೆ ಮಾಡುವುದು.
- ಕನಿಷ್ಟಕೂಲಿ ಕಾನೂನಿನ ಪರಿಣಾಮಕಾರಿ ಮತ್ತು ಕಟ್ಟುನಿಟ್ಟಾದ ಜಾರಿಗೆ ನಿಯಂತ್ರಣ ಮತ್ತು ಜಾರಿ ವ್ಯವಸ್ಥೆಯ ಆಮೂಲಾಗ್ರ ಸುಧಾರಣೆ, ಸೇವಾ ಸೌಲಭ್ಯಗಳ ಕುರಿತು ಸಮಗ್ರ ಶಾಸನ ತರುವುದು.
- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ 100 ದಿನಗಳ ಮಿತಿಯನ್ನು ತೆಗೆಯುವುದು; ಕಾರ್ಮಿಕರಿಗೆ ಕೆಲಸ ಒದಗಿಸದಿರುವಾಗ ನಿರುದ್ಯೋಗ ಭತ್ಯೆ ಪಾವತಿಯಾಗುವಂತೆ ಮಾಡುವುದು.
- ಕೃಷಿ ಕಾರ್ಮಿಕರಿಗೆ ಪುಕ್ಕಟೆಯಾಗಿ ಭೂಮಿಯ ಮರುವಿತರಣೆ; ಎಲ್ಲ ಗ್ರಾಮೀಣ ಕುಟುಂಬಗಳಿಗೆ ಮನೆನಿವೇಶನ ಭೂಮಿಯನ್ನು ಒದಗಿಸುವುದು;
- ಎಲ್ಲ ಭೂಸ್ವಾಧೀನ ಮತ್ತು ಸ್ಥಳಾಂತರಗಳ ಸಂದರ್ಭಗಳಲ್ಲಿ ಪೂರ್ಣ ಪರಿಹಾರ ಮತ್ತು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗೆ ಅರ್ಹರಾಗುವ ಸಂತ್ರಸ್ತರು ಎಂದು ಕೃಷಿ ಕಾರ್ಮಿಕರ ಹಕ್ಕುಗಳಿಗೆ ಮಾನ್ಯತೆ.

- ಜಿ.ಡಿ.ಪಿ.ಶೇ. 6 ಶಿಕ್ಷಣಕ್ಕೆ ಮತ್ತು ಶೇ.5 ಆರೋಗ್ಯಕ್ಕೆ ಮೀಸಲು
- ಜಾತ್ಯಾತೀತೆಯ ರಕ್ಷಣೆಗೆ ಬಿಗಿ ಕ್ರಮ
- ಕೋಮು ಹಿಂಸಾಚಾರ ತಡೆಗೆ ಕಠಿಣ ಕ್ರಮ
- ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಸಾಚಾರ್ ಸಮಿತಿ ಮತ್ತು ರಂಗನಾಥ ಮಿಶ್ರ ಆಯೋಗದ ಶಿಫಾರಸ್ಸು ಜಾರಿ

**ಪ್ರಮುಖ ಸಂವಿಧಾನಿಕ ಮತ್ತು ಶಾಸಕಾಂಗ ಸುಧಾರಣೆಗಳು**

- ಒಂದು ರಾಜ್ಯವನ್ನು ಇಬ್ಬಾಗ ಮಾಡುವ ಅಥವ ಸಂಸತ್ತು ಮರುಸಂಘಟಿಸುವ ಮೊದಲು ಸಂಬಂಧಪಟ್ಟ ರಾಜ್ಯ ವಿಧಾನ ಮಂಡಲದ ಒಪ್ಪಿಗೆ ಇರಬೇಕೆಂದು ವಿಧಿಸಲು ಸಂವಿಧಾನದ ಕಲಮು 3ನ್ನು ತಿದ್ದುಪಡಿ ಮಾಡುವುದು.
- ಯಾವುದೇ ಅಂತರಾಷ್ಟ್ರೀಯ ಸಂಧಿಗೆ ಸಂಸತ್ತಿನ ಅಂಗೀಕಾರವನ್ನು ಕಡ್ಡಾಯಗೊಳಿಸಲು ಸಂವಿಧಾನಕ್ಕೆ ತಿದ್ದುಪಡಿ.

**JANASHAKTHI KANNADA VARA PATRIKE:** Printed & Published by : **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). Editor **NITHYANANDASWAMI**
ಪ್ರತಿಗಳು : 2000